ದಿನಾಂಕ 11.04.2019 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲುಃ- ಆರೋಪಿ 1 ರಿಂದ 4 ರವರ ಪರವಾಗಿ ಶ್ರೀ.ಆರ್.ಎಸ್. ವಕೀಲರಿಂದಃ**

64. ದಿನಾಂಕ 29.01.2017 ರಂದು ಮಾಡಿದ ನಿಶಾನೆ ಪಿ 11 ರ ಪಂಚನಾಮೆಗೆ ನೀವು ಸಾಕ್ಷಿದಾರರಾಗಿ ಬರಬೇಕು ಎಂದು ಸದರಿ ದಾಖಲೆಯ ಪಂಚರಿಗೆ ನಾನು ಲಿಖಿತ ನೋಟೀಸ್‌ನ್ನು ಕೊಟ್ಟಿಲ್ಲ. ನಿಶಾನೆ ಪಿ 11 ಪಂಚನಾಮೆಯಲ್ಲಿ ಪಂಚನಾಮೆ ಮಾಡಿದ ಜಾಗಕ್ಕೆ ಇತರೆ ವಾಹನಗಳು ದಿನಾ ಬಂದು ನಿಂತಿರುವುದು ಕಂಡುಬರುತ್ತದೆ ಎಂದು ನಮೂದಿಸಲಾಗಿದೆ ಎನ್ನುವುದು ಸರಿ. ಆ ದಿವಸ ನಾವು ಹೋದಾಗ ಅಲ್ಲಿ ಯಾವುದೇ ವಾಹನಗಳಿರಲಿಲ್ಲ.

65. 1 ನೇ ಆರೋಪಿಯನ್ನು ಕೋಲಾರದಲ್ಲಿ ವಶಕ್ಕೆ ಪಡೆದ ಜಾಗದಲ್ಲಿ ನನ್ನ ಸಿಬ್ಬಂದಿಗಳು ಪಂಚನಾಮೆಯನ್ನು ಮಾಡಿಲ್ಲ. ಆರೋಪಿ-2 ರಿಂದ 4 ರವರನ್ನು ರಾಮನಗರದ ರೈಲ್ವೇ ನಿಲ್ದಾಣದ ಬಳಿ ವಶಕ್ಕೆ ಪಡೆದ ಸಂದರ್ಭದಲ್ಲಿ ಆ ಜಾಗದಲ್ಲಿ ನನ್ನ ಸಿಬ್ಬಂದಿಗಳು ಪಂಚನಾಮೆಯನ್ನು ಮಾಡಿಲ್ಲ.

66. ನಿಶಾನೆ ಪಿ 11 ರ ಪಂಚನಾಮೆಯನ್ನು ಹಗಲಿನ ಸಮಯದಲ್ಲಿ ಮಾಡಲು ತೊಂದರೆ ಇರಲಿಲ್ಲ ಎನ್ನುವುದು ಸರಿಯಲ್ಲ. ಆ ದಿವಸ ರಾತ್ರಿ ನಾವು ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಸದರಿ

ಪಂಚನಾಮೆಯನ್ನು ಠಾಣೆಯಲ್ಲಿಯೇ ತಯಾರಿಸಿ ಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

67. 1 ನೇ ಆರೋಪಿ ಚಿನ್ನದ ಆಭರಣಗಳನ್ನು ಕೋಲಾರ ಟೌನ್, ಅಮ್ಮವಾರಪೇಟೆ, ಪದ್ಮಾವತಿ ಜ್ಯುವೆಲ್ಲರ್ಸ್ ನಲ್ಲಿ ಅಡವಿಟ್ಟ ಕುರಿತು ಗಿರವಿ ರಶೀದಿಯನ್ನು ಪಡೆದುಕೊಂಡಿದ್ದೇನೆ. ಆರೋಪಿ-2 ರಿಂದ 4 ರವರಿಂದ ಮೊಬೈಲ್‌ನ್ನು ಅಮಾನತು ಪಡಿಸಿಕೊಳ್ಳುವಾಗ ಠಾಣೆಯಲ್ಲಿ ಪಂಚನಾಮೆಯನ್ನು ಬರೆಯಲಾಗಿದೆ. ಈ ಸಂಬಂಧವಾಗಿ ವಿಡಿಯೋ ಚಿತ್ರೀಕರಣ ಮಾಡಿಲ್ಲ.

68. ಆರೋಪಿ-2 ರಿಂದ 4 ರವರನ್ನು ದಸ್ತಗಿರಿ ಮಾಡಲು ಸಿಬ್ಬಂದಿಯನ್ನು ಕಳುಹಿಸುವಾಗ ಚಹರೆಯನ್ನು ತಿಳಿಸಿದ್ದೇನೆ. ಆದರೆ ಫೋಟೋ ಮುಂತಾದ ದಾಖಲೆಯನ್ನು ಕೊಟ್ಟಿಲ್ಲ.

69. ಆರೋಪಿ-1 ರಿಂದ 4 ರವರು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ ಎನ್ನುವುದು ಸುಳ್ಳು. ಅವರ ವಿರುದ್ಧವಾಗಿ ನಾನು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.